ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ 'ಬಿ' ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440, ಚಾಮರಾಜನಗರ ಜಿಲ್ಲೆ**

☎: 08224-252149    🖷: 08224-256051    Email: jsscwk@gmail.com    www.jsscwkgl.org

**ಪ್ರಕಟಣೆಯ ಕೃಪೆಗಾಗಿ**

**ಎನ್‌ಎಸ್‌ಎಸ್ ವಿದ್ಯಾರ್ಥಿಯಿಂದ ಸ್ವಚ್ಛತೆ ಪಾಠ**

ಕೊಳ್ಳೇಗಾಲ: 16.3.19 ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಆಯೋಜಿಸಿದ್ದ ವಾರ್ಷಿಕ ವಿಶೇಷ ಶಿಬಿರದಲ್ಲಿ ಶಿಬಿರಾರ್ಥಿಗಳು ಶ್ರಮದಾನದ ಮೂಲಕ ಕಾಮಗೆರೆ ಗ್ರಾಮದ ಸಾರ್ವಜನಿಕ ಆಸ್ಪತ್ರೆಯ ಆವರಣವನ್ನು ಸ್ವಚ್ಛಗೊಳಿಸಿದರು.

ಪ್ರೊ.ಆರ್.ಪಿ.ಸೌಮ್ಯ, ಸಹಾಯಕ ವಾಣಿಜ್ಯಶಾಸ್ತ್ರ ಪ್ರಾಧ್ಯಪಕರು ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿ ಶಿಬಿರವು ಶಿಬಿರಾರ್ಥಿಗಳಿಗೆ ಉತ್ತಮ ಸೇವೆ ಜ್ಞಾನ, ನಡೆ-ನುಡಿ, ಸಂಸ್ಕೃತಿಯನ್ನು ಕಲಿಸುತ್ತದೆ. ಸ್ವಚ್ಛತೆಯ ಮಹತ್ವ, ಪರಿಸರ ಸಂರಕ್ಷಣೆಯ ಅವಶ್ಯಕತೆ, ನೀರಿನ ಮಹತ್ವ, ವಿದ್ಯುಚ್ಛಕ್ತಿಯ ಅಭಾವ, ಗಿಡ-ಮರಗಳ ಅವಶ್ಯಕತೆ ಹೀಗೆ ಹತ್ತು ಹಲವು ಸಜೀವ, ನಿರ್ಜಿವ ವಸ್ತುಗಳ ಅವಶ್ಯಕತೆಯಿರುವುದನ್ನು ಅರಿಯಬಹುದಾಗಿದೆ ಎಂದು ತಿಳಿಸಿದರು.

ಶಿಬಿರಾರ್ಥಿಗಳ ಪರವಾಗಿ ಶಿಬಿರದ ನಾಯಕಿ ಕು.ರಾಜೇಶ್ವರಿ ಮಾತನಾಡಿ ತರಗತಿಗಳಲ್ಲಿ ಅಧ್ಯಾಪಕರು ನಮಗೆ ಪಠ್ಯೆ ವಿಷಯಗಳನ್ನಷ್ಟೇ ಹೇಳಿಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತದೆ ಈಗಿನ ಚಾತುರ್ಮಾಸ ಪದ್ಧತಿಯಲ್ಲಿ. ಇಲ್ಲಿ ನಾವು ಪ್ರಾಯೋಗಿಕವಾಗಿ ಹಳ್ಳಿಗರ ಜೀವನದ ಪದ್ಧತಿ ಅರಿಯಬಹುದಾಗಿದೆ. ಒಂದರ್ಥದಲ್ಲಿ ಈ ದೇಶವು ಇನ್ನೂ ಸ್ವಚ್ಛತೆ ಅಭಿಯಾನ, ಆರೋಗ್ಯ ಯೋಜನೆಗಳು, ನೈರ್ಮಲ್ಯತೆ, ರೈತರ ಜೀವನದಲ್ಲಿನ ಕಷ್ಟಗಳನ್ನು ಅರಿತೆಯಿಲ್ಲವೆಂದು ಹೇಳಬೇಕಾಗಿದೆ ಎಂದು ತಿಳಿಸಿದರು.

ಸಂಜೆಯ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ದೊರೆಸ್ವಾಮಿ, ಮದ್ದೂರು, ಸಾಹಿತಿಗಳು ಪಾಲ್ಗೊಂಡು ರಾಷ್ಟ್ರೀಯ ಸೇವಾ ಯೋಜನೆ ನಿಜಕ್ಕೂ ಒಂದು ಉತ್ತಮ ಯೋಜನೆಯಾಗಿದ್ದು ವಿದ್ಯಾರ್ಥಿಗಳು ದೇಶಪ್ರೇಮ, ಸೇವೆಯ ಮಹತ್ವ, ಕೂಡಿ ಬಾಳುವಿಕೆಯ ಸುಖ, ವಿವಿಧ ರೀತಿಯ ಕೌಶಲ ಬೆಳೆಸಿಕೊಳ್ಳಲು ಉತ್ತಮ ವೇದಿಕೆಯಾಗಿದ್ದು ಅದರ ಸದುಪಯೋಗಪಡಿಸಿಕೊಳ್ಳಿ ಎಂದು ಕರೆ ನೀಡಿದರು.

ಶ್ರೀ ಬಸವಣ್ಣ, ಕಾಮಗೆರೆ ಜೆಎಸ್‌ಎಸ್ ಶಾಲೆಯ ಶಿಕ್ಷಕರು ಇವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮಾಧಿಕಾರಿ ಪ್ರೊ.ಬಸವರಾಜು, ಪ್ರೊ.ವಾಣಿ ಮತ್ತು ಪ್ರೊ.ಪ್ರಕಾಶ್ ರವರು ಉಪಸ್ಥಿತರಿದ್ದರು.

ಶಿಬಿರಾರ್ಥಿಗಳು ಕಾಮಗೆರೆ ಗ್ರಾಮದ ಸಾರ್ವಜನಿಕ ಆಸ್ಪತ್ರೆಯ ಆವರಣವನ್ನು ಸ್ವಚ್ಛಗೊಳಿಸುತ್ತಿರುವುದು




ಶಿಬಿರಾರ್ಥಿಗಳು ಕಾಮಗೆರೆ ಗ್ರಾಮದ ಸಾರ್ವಜನಿಕ ಆಸ್ಪತ್ರೆಯ ಆವರಣವನ್ನು ಸ್ವಚ್ಛಗೊಳಿಸುತ್ತಿರುವುದು



ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಆಯೋಜಿಸಿದ್ದ ವಾರ್ಷಿಕ ವಿಶೇಷ ಶಿಬಿರದಲ್ಲಿ ಶ್ರೀ ಬಸವಣ್ಣ, ಕಾಮಗೆರೆ ಜೆಎಸ್‌ಎಸ್ ಶಾಲೆಯ ಶಿಕ್ಷಕರು ಇವರು ಅಧ್ಯಕ್ಷತೆ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಪ್ರೊ.ಪ್ರಕಾಶ್, ಶ್ರೀ ದೊರೆಸ್ವಾಮಿ, ಪ್ರೊ.ಬಸವರಾಜು ಮತ್ತು ಪ್ರೊ. ವಾಣಿರವನ್ನು ಕಾಣಬಹುದು.

